ಅವರಿಬ್ಬರನ್ನು ಬೇರೆಬೇರೆ ಮಾಡಿದ್ದಂತಹವು ಅವರು ಹಲ್ಲುಗಳು. ಪನ್ನೇಶಿಯ ಮೇಲ್ಭಾಗದ ಮುಂದಿನ ಒಂದು ಹಲ್ಲು ಮುರಿದು ಹೋಗಿತ್ತು. ಅವರು ನಕ್ಕರೆ ಅಥವಾ ಬಾಯಿಬಿಟ್ಟರೆ ಅವರ ಹಲ್ಲಿನಿಂದ ಇವನು ಪನ್ನೇಶಿ ಮತ್ತು ಅವನು ಪೆದ್ದೇಶಿ ಎಂದು ಗುರುತು ಹಚ್ಚಬಹುದಿತ್ತು. ಅವರ ಅಂಗೈ ಬೆರಳುಗಳು ಮರ ಕೊಯ್ದು ಕೊಯ್ದು ಒರಟು ಕಲ್ಲಿನಂತಿದ್ದವು. ಮುಖಗಳ ಮೇಲೆ ನೀರು ಈಗಷ್ಟೇ ಹಾಕಿಕೊಂಡು ಬಂದಿದ್ದರಿಂದ ಒದ್ದೆಯಾಗಿದ್ದವು. ಕಿವಿಯ ಹತ್ತಿರ ಮತ್ತು ತಲೆಯ ಕೂದಲಿನಲ್ಲಿ ಮರದ ಚಿಕ್ಕಚಿಕ್ಕ ಪುಡಿ ತುಂಬಿತ್ತು. ಮನೆಯ ಮುಂದೆ ಜನ ಸೇರಿರುವುದ ಕಂಡು ತಮ್ಮ ತಾಯಿ ಏನಾದರೂ ಹೋದಳಾ ಎಂದು ಆತಂಕದಿಂದ ಜೋರಾಗಿ ಹೆಜ್ಜೆ ಇಟ್ಟುಕೊಂಡು ಬಂದರು. ಅವರ ಊಹೆ ಸುಳ್ಳಾಗಿ ಮನೆ ತಲುಪಿದ ತಕ್ಷಣಕ್ಕೆ ಅವರ ಮುಖಗಳಿಗೆ ಮೈಕ್ರೋಫೋನ್‌ಗಳನ್ನು ಹಿಡಿದು ಮೀಡಿಯಾದವರು ಪ್ರಶ್ನೆಗಳ ಮಳೆ ಸುರಿದರು: 'ಅಲ್ಲಿ ಇನ್ನೂ ಏನೇನು ಸಿಕ್ಕಿತು? ಮೊದಲು ಕಂಡವರು ಯಾರು? ಆಮೇಲೆ ಅದರ ಎಡಕಿವಿಯನ್ನು ಏನು ಮಾಡಿದ್ರಿ?' ಒಬ್ಬ ಪೊಲೀಸ್, 'ಬೋಳಿ ಮಕ್ಕಳಾ ಎಲ್ಲಿ ಇಟ್ಟದ್ದೀರಾ ಹೇಳ್ರೀ? ಇನ್ನೂ ಏನೇನು ಸಿಕ್ಕಿದೆ ಕೊಡ್ರಿ?' ಎಂದು ದುರುಗುಟ್ಟಿಕೊಂಡು ಕೇಳಿದ. ತಮ್ಮ ಜೀವಮಾನದಲ್ಲಿಯೇ ಇಂತಹದನ್ನು ನಿರೀಕ್ಷೆ ಮಾಡದ ಅವರು, 'ಸಾರ್ ನಮ್ಮ ತಾಯಾಣೆಗೂ ಏನು ಗೊತ್ತಿಲ್ಲ? ಕಿವಿ ಇತ್ತೋ ಇಲ್ಲವೋ ನೋಡ್ಲೇ ಇಲ್ಲ ಸಾರ್. ಮಣ್ಣಲ್ಲಿ ಮುಚ್ಚಿಕೊಂಡು ಬೇರುಗಳು ಅದನ್ನು ಸುತ್ತಿಕೊಂಡಿದ್ದವು. ಅದು ಹೊಳೆದ ಬೆಳಕಿಗೆ ನಮಗೆ ಭಯವೇ ಆಯ್ತು. ಆದರೆ ಒಂದಂತು ಸತ್ಯ ಅದು ತುಂಬಾ ಭಾರವಿತ್ತು. ಅಷ್ಟು ಹೊತ್ತಿಗೆ ಆಗಲೇ ಜನಗಳು ಬಂದು ಸೇರಿದ್ದರು. ಇನ್‌ಸ್ಪೆಕ್ಟರ್ ಜೀಪಲಿ ಬಂದು ತಾಂಡು ಹೋದರು' ಎಂದು ಹೇಳಿದರು.

'ನಿಮ್ಮ ಜೊತೆಗೆ ಇನ್ನೂ ಎಷ್ಟು ಜನ ಕೆಲಸ ಮಾಡ್ತಾ ಇದ್ದರು?' ಎಂದು ಕೇಳಿದ ಪ್ರಶ್ನೆಗೆ 'ನಮ್ಮೂರ್ನವರೇ ಒಂದೈದು ಜನ ಸ್ವಾಮಿ' ಎಂದರು. ಒಬ್ಬ ವರದಿಗಾರ: 'ವಜ್ರದ ಕಣ್ಣುಗಳಿದ್ದವಂತೆ ಹೌದಾ?' ಎಂದ. 'ಏನೋ ಸಾರ್ ಇರಬಹುದೇನೋ' ಅಂದರು. ದಫೇದಾರ್ ಒಬ್ಬ ಪೊಲೀಸ್‌ಗೆ 'ಇವನ ಮನೆ ಜಪ್ತಿ ಮಾಡ್ರಿ. ನೋಡೋಣ. ಈ ಬೋಳಿಮಕ್ಕಳನ್ನು ನಂಬುವುದಕ್ಕೆ ಆಗುವುದಿಲ್ಲ' ಎಂದು ಆದೇಶ ಕೊಡುವವನ ರೀತಿ ಹೇಳಿದ. ಮನೆಯೊಳಗಡೆ ಮೂರು ಈಚಲು ಚಾಪೆಗಳು. ಅವುಗಳನ್ನು ಸುತ್ತಿ ಮೂಲೆಗೆ ಆನಿಸಿ ನಿಲ್ಲಿಸಲಾಗಿತ್ತು. ಎರಡು ಟ್ರಂಕು. ಬೆಟ್ಟವನ್ನು ಹೊತ್ತುಕೊಂಡು ಹೋಗುತ್ತಿರುವ ಆಂಜನೇಯನ ಫೋಟೊ. ಅದರ ಒಳಗೆ ಐದು ರೂಪಾಯಿಯ ಕಾಯಿನ್ನನ್ನು ಇಡಲಾಗಿತ್ತು. ಮತ್ತೊಂದು ಶಿವ-ಪಾರ್ವತಿಯರ ತಲೆಗಳು ಮಾತ್ರ ಇರುವ ಫೋಟೊ. ಅದು ತುಂಬಾ ಹಳೆಯದಾಗಿದ್ದುದರಿಂದಲೋ ಏನೋ ಬಣ್ಣವನ್ನು ಕಳೆದುಕೊಂಡು ಡಲ್ಲಾಗಿತ್ತು. ಆದರೆ ಆ ಫೋಟೊದ ಒಳಗೆ ಇದ್ದ ಅಚ್ಚ ಹೊಸ ಐದು ರೂಪಾಯಿ ನೋಟಿನಲ್ಲಿ ಗಾಂಧಿ ನಗುತ್ತಿದ್ದ. ಒಂದು ಕೋಣೆ. ಒಂದು ಅಡುಗೆ ಮನೆ. ಅಡುಗೆ ಮನೆಯಲ್ಲಿ ಕಾರ ಅರಿಯುವ ಕಲ್ಲು ಮತ್ತು ಬಂಡೆ. ಸಣ್ಣವೂ ದೊಡ್ಡವೂ ಸೇರಿ ಹತ್ತು ಅಲ್ಯೂಮಿನಿಯಂ ಪಾತ್ರೆಗಳು. ಒಣಗಿದ ಕುಂಬಳಕಾಯಿ, ನೀರು ತುಂಬಿರುವ ಮಣ್ಣಿನ ಗುಡಾಣದ ಹತ್ತಿರ ಇತ್ತು. ಒಂದು ತಂತಿಯಲ್ಲಿ ಒಣಗಿದ ಮಾಂಸದ ಮುರಿಗೆಗಳನ್ನು ನೇತು ಹಾಕಲಾಗಿತ್ತು. ಒಂದು ಕಡೆಯಿಂದ ಎಲ್ಲಾ ಶೋಧಿಸಿ ನಿರಾಸೆಯಿಂದ ಪೊಲೀಸ್ ಹೊರಬಂದು 'ಇಲ್ಲಾ ಸಾರ್ ಸಿಗಲಿಲ್ಲ. ಎಲ್ಲಿ ಅಡಗಿಸಿಟ್ಟದ್ದಾರೊ ಏನೋ ಬಡ್ಡಿಮಕ್ಕಳು' ಎಂದು ಬೈದ. ಹನುಮಗಂಗಮ್ಮನಿಗೆ ವಯಸ್ಸಾಗಿದ್ದುದರಿಂದಲೋ ಏನೋ ಕ್ಷೀಣವಾದ ಧ್ವನಿಯಲ್ಲಿ 'ಯಾರೋ? ಏನ್ಮಾಡ್ತಿದ್ದೀರಪ್ಪ ಒಳಗೆ?' ಎಂದಳು. ಅವಳ ಧ್ವನಿ ಅವಳಿಗೂ ಕೇಳಿಸದ ರೀತಿಯಿತ್ತು. ಮತ್ತೆ ನಾಲ್ಕೈದು ಕಾರು, ಜೀಪುಗಳು ಬಂದವು. ಅವುಗಳಿಂದ ಎಸ್.ಪಿ., ಡಿ.ಸಿ. ಇಳಿದರು. ಎಸ್.ಪಿ. ಇಳಿದವರೇ ನೇರ ಅವರ ಹತ್ತಿರ ಹೋಗಿ 'ಎನ್‌ಕ್ವಯರಿ ಮಾಡಿದಿರಾ? ಏನಂತೆ? ಎಲ್ಲಿ ಇಟ್ಟದ್ದಾರಂತೆ?' ಎಂದರು. ಡಿ.ಸಿ. ನಿಂತು ಸುತ್ತ ಒಂದು ಕ್ಷಣ ನೋಡಿದರು. 'ನೋಡ್ಲಿಲ್ಲ ಅಂಥ ಸುಳ್ಳು ಹೇಳ್ತಿದ್ದಾರೆ ಸಾರ್. ಮನೇನೂ ಜಪ್ತಿ ಮಾಡಿದ್ದಾಯ್ತು. ಡಿ.ಸಿ ಮತ್ತು ಎಸ್.ಪಿ. ಗುಟ್ಟಾಗಿ ಏನೇನೋ ಮಾತಾಡಿ ಕೊಂಡರು. ಆಮೇಲೆ ಎಸ್.ಪಿ. ಅವರು, 'ಇಲ್ಲೋಡಿ ಪನ್ನೇಶಿ, ಪೆದ್ದೇಶಿ ನಮ್ಮ ಅನುಮತಿ ಇಲ್ಲದೆ ಊರನ್ನು ಬಿಟ್ಟು ಹೋಗುವ ಹಾಗಿಲ್ಲ. ಸ್ಟೇಷನ್‌ಗೆ ಬಂದು

